ದಿನಾಂಕ 05-07-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಸಿ.ಬಿ.ಡಿ. ವಕೀಲರಿಂದಃ**

ರಿ.ಸ.ನಂ.757 ಒಟ್ಟು ಎಷ್ಟು ಹಿಸ್ಸೆಗಳಾಗಿ ಪೋಡಿ ಆಗಿರುತ್ತದೆ ಎಂದರೆ ಮೂರು ಹಿಸ್ಸೆಗಳಾಗಿರಬಹುದು. ರಿ.ಸ.ನಂ.757 ರಲ್ಲಿ ಒಟ್ಟು 21 ಎಕರೆ 26 ಗುಂಟೆ ವಿಸ್ತೀರ್ಣ ಇದೆ ಎಂದರೆ ನನಗೆ ತಿಳಿದಿಲ್ಲ. ಅದು 3 ಎಕರೆ 5 ಗುಂಟೆ, 3 ಎಕರೆ 35 ಗುಂಟೆ, 4 ಎಕರೆ ಹಾಗೂ 10 ಎಕರೆ 26 ಗುಂಟೆಯಂತೆ ಒಟ್ಟು 4 ಹಿಸ್ಸೆಗಳಾಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಅತಿಕ್ರಮ ಆಗಿರುವುದು ತಿಳಿಯಬೇಕೆಂದರೆ ಒಟ್ಟು 4 ಹಿಸ್ಸೆಗಳನ್ನು ಅಳತೆ ಮಾಡಿದರೆ ಮಾತ್ರ ತಿಳಿಯುತ್ತದೆ ಎಂದರೆ ನಮ್ಮ ಅರ್ಜಿಯ ಮೇರೆಗೆ ಅಳತೆ ಮಾಡಿ ವರದಿ ಕೊಟ್ಟಿರುತ್ತಾರೆ. ಅಕ್ಕಪಕ್ಕದ ಜಮೀನುದಾರರಿಗೆ ಹಾಗೂ ಉಳಿದ ಹಿಸ್ಸೆದಾರರಿಗೆ ಯಾವುದೇ ನೋಟೀಸ್ ನೀಡದೇ ಸರ್ವೆ ಮಾಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ರಿ.ಸ.ನಂ.758 ರ ಮಾಲೀಕರು ಸ್ವ-ಇಚ್ಚೆಯಿಂದ ಒತ್ತುವರಿ ಮಾಡಿಕೊಳ್ಳಲಾಗಿದೆ ಎನ್ನಲಾದ 4 ಗುಂಟೆ ಜಮೀನನ್ನು ಬಿಟ್ಟುಕೊಟ್ಟ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸ್ವ-ಇಚ್ಚೆಯಿಂದ ಬಿಟ್ಟುಕೊಟ್ಟಿರುತ್ತಾರೆ. ಅವರನ್ನು ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಸೇರಿಸಲಾಗಿಲ್ಲ ಎಂದರೆ ಒತ್ತುವರಿ ಜಮೀನನ್ನು ಬಿಟ್ಟುಕೊಟ್ಟಿರುವುದರಿಂದ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಯರ ಜಮೀನಿನ ನಡುವೆ ಮಣ್ಣಿನ ಒಡ್ಡು ಇದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ನಾವು ಹಾಗೂ ಅವರ ಜಮೀನಿನಲ್ಲಿ ಅವರು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ.

3. ಸರ್ವೆ ವರದಿಯಂತೆ ಒತ್ತುವರಿ ಜಮೀನನ್ನು ತೆರವುಗೊಳಿಸಿಕೊಳ್ಳುವಂತೆ ತಹಶೀಲ್ದಾರವರಿಗೆ ಯಾವುದೇ ಅರ್ಜಿ ನೀಡಿರುವುದಿಲ್ಲ. ಆದ್ದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಸರ್ವೆ ವರದಿಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಖಲಂದರ ಸಾಬ್ ರಬ್ಬಾನಿ, ಪಶ್ಚಿಮಕ್ಕೆ ಧ್ರಾಕ್ಷಾಯಣಿ ಗದಗಿಮಠ ರವರ ಜಮೀನು, ಉತ್ತರಕ್ಕೆ ಪ್ರತಿವಾದಿಯರ

ಜಮೀನು, ದಕ್ಷಿಣಕ್ಕೆ ನಮಗೆ ಸೇರಿದ ಜಮೀನುಗಳು ಇರುತ್ತವೆ. ಚಕ್ಕುಬಂದಿಯನ್ನು ತಪ್ಪಾಗಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಒತ್ತುವರಿ ಮಾಡದಿದ್ದರೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.